ಓ.ಎಸ್.ನಂ.249/2019.
ಪಿ.ಡಬ್ಲ್ಯು:1

**ದಿನಾಂಕ:13.12.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಎಂ.ಎನ್., ವಕೀಲರಿಂದ:</u>**

ದಾವಾ ಎ ಶೆಡ್ಯೂಲ್ ಆಸ್ತಿಯ ಸಂಪೂರ್ಣ ವಿಸ್ತೀರ್ಣದಲ್ಲಿ ನಾನು ಮನೆ ಕಟ್ಟಿಕೊಂಡಿದ್ದೇನೆಂದರೆ ಸರಿಯಲ್ಲ. ನಾನು 9 X 24 ಅಡಿಗಳ ವಿಸ್ತಿರ್ಣದಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ, ಸಾಕ್ಷಿಯು ಮುಂದುವರಿದು ಪ್ರತಿವಾದಿಗಳು 9 X 17 ವಿಸ್ತೀರ್ಣ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನನಗೆ ಸೇರಿದ 9 X 24 ಅಡಿಗಳ ವಿಸ್ತಿರ್ಣದ ಮನೆ ನನ್ನ ತಂದೆಯ ಕಾಲದಿಂದಲೂ ಇರುತ್ತದೆ. ಸದರಿ ಮನೆ ನಿರ್ಮಾಣ ಮಾಡಲು ನನ್ನ ತಂದೆ ಪರವಾನಿಗೆ ಪಡೆದಿದ್ದರೂ ಇಲ್ಲವೋ ನನಗೆ ಗೊತ್ತಿಲ್ಲ. 9 X 24 ಅಡಿಗಳ ವಿಸ್ತಿರ್ಣದಲ್ಲಿ ಮನೆ ಕಟ್ಟಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ದಾವಾ ಎ ಅನುಸೂಚಿ ಸ್ವತ್ತು 18 X 41 ರ ಪೈಕಿ 9 x 41 ಅಡಿಗಳು ನನ್ನ ತಮ್ಮ ಈಶ್ವರಪ್ಪನ ಹೆಸರಿಗೆ ಹೋಗಿರುತ್ತದೆ ನನಗೆ 9 X 41 ಅಡಿಗಳ ವಿಸ್ತೀರ್ಣದ ಆಸ್ತಿ ಮಾತ್ರ ಬಂದಿರುತ್ತದೆ ಆದರೆ ಪುರಸಬೆಯವರು 18 X 41 ಅಡಿಗಳು ಎಂದು ಪುರಸಭೆಯವರು ನನ್ನ ಹೆಸರಿಗೆ ಖಾತೆ ಇಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 24 ಅಡಿಗಳ ಪೈಕಿ ನನ್ನ ತಮ್ಮ ಈಶ್ವರಪ್ಪ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿಯು ತನ್ನ ತಮ್ಮ ಈಶ್ವರಪ್ಪನು ಅವನ ಹಿಸ್ಸೆಗೆ ಬಂದ ಆಸ್ತಿಯನ್ನು ಹೊನ್ನಮ್ಮ ಮತ್ತು ಚಂದ್ರಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 41 ಅಡಿಗಳ ಆಸ್ತಿಯು ನಿಮ್ಮ ತಮ್ಮ ಈಶ್ವರಪ್ಪನಿಗೆ ಹೋಗಿರುವ ಬಗ್ಗೆ ಆತನು ಮಾರಾಟ ಮಾಡಿರುವ ಬಗ್ಗೆ ಹಾಗೂ ನೀವು 9 X 41 ಅಡಿಗಳಲ್ಲಿ ಮಾತ್ರ ಸ್ವಾಧೀನ ಇರುವ ಬಗ್ಗೆ ನಿಮ್ಮ ವಾದ

ಪತ್ರ ಮತ್ತು ನಿಮ್ಮ ಸಾಕ್ಷ ಪತ್ರದಲ್ಲಿ ತಿಳಿಸಿದ್ದಿರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ತಿಳಿಸಿದ್ದೇನೆಂದು ನುಡಿಯುತ್ತಾರೆ.

ನಿಪಿ-5 ರಂತೆ ಈ ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಸಲುದಾವಾ ಸಂ.414/2016 ರಂತೆ ದಾವೆ ದಾಖಲು ಮಾಡಿದ್ದೆ ಎಂದರೆ ಸಾಕ್ಷಿಯು ಈ ಆಸ್ತಿಯೇ ಬೇರೆ ಆ ಆಸ್ತಿಯೇ ಬೇರೆ ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 41 ಅಡಿಗಳ ವಿಸ್ತಿರ್ಣದ ಆಸ್ತಿಗೆ ಮಾತ್ರ ನಾನು ಮಾಲೀಕ ಮತ್ತು ಹಕ್ಕುದಾರ ಎಂದರೆ ಸರಿ. ದಾವಾ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 41 ಅಡಿಗಳ ಆಸ್ತಿ ಇಲ್ಲಿಯವರೆಗೂ ನನ್ನ ಹೆಸರಿಗೆ ಖಾತೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಪುರಸಭೆಯವರಿಂದ ಬದಲಾವಣೆ ಮಾಡಿಸಿಕೊಂಡಿಲ್ಲ ಇನ್ನೂ ಸಹ 18 X 41 ಅಡಿಗಳ ವಿಸ್ತಿರ್ಣದ ಆಸ್ತಿಗೆ ನನ್ನ ಹೆಸರಿಗೆ ಖಾತೆ ಬರುತ್ತಿದೆ ಎಂದು ನುಡಿಯುತ್ತಾರೆ.

ದಾವ ಎ ಶೆಡ್ಯೂಲ್ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಬಡಕಯ್ಯ, ಪಶ್ಚಿಮಕ್ಕೆ ಹೊನ್ನಮ್ಮ, ಉತ್ತರಕ್ಕೆ ಹೊನ್ನಮ್ಮ, ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ. ದಾವಾ ಎ ಅನುಸೂಚಿ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಗೆ ಸೇರಿದ ಆಸ್ತಿ ಇರುತ್ತದೆ, ಸಾಕ್ಷಿಯು ಮುಂದುವರೆದು ನಮ್ಮ ಆಸ್ತಿಯನ್ನು ಸೇರಿಸಿಕೊಂಡು ಕಟ್ಟಿಕೊಂಡಿದ್ದಾರೆಂದು ನುಡಿಯುತ್ತಾರೆ. ದಾವ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 41 ನಿಮ್ಮ ತಮ್ಮ ಈಶ್ವರಪ್ಪರವರ ಹಿಸ್ಸೆಗೆ ಹೋಗಿದ್ದು 9 X 41 ಅಡಿಗಳು ನಿಮ್ಮ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಅದರಂತೆ 9 X 41 ಅಡಿಗಳ ವಿಸ್ತಿರ್ಣದ ಆಸ್ತಿಯಲ್ಲಿ ನೀವು ಸ್ವಾಧೀನಾನುಭವದಲ್ಲಿದ್ದೀರಿ ಎಂದರೆ ಸಾಕ್ಷಿಯು 9 X 24 ಅಡಿಗಳ ವಿಸ್ತಿರ್ಣದಲ್ಲಿ ನಾನು ಸ್ವಾಧೀನಾನುಭದಲ್ಲಿದ್ದೇನೆ 9 X 17 ಅಡಿಗಳ ವಿಸ್ತೀರ್ಣದ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿಕೊಂಡಿದ್ದಾನೆಂದು ನುಡಿಯುತ್ತಾರೆ.

ಪ್ರತಿವಾದಿಯು ಮನೆಕಟ್ಟಿರುವ ಆಸ್ತಿಯು ಅವರಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಸಿದ್ದರಾಜು, ಸರೋಜಮ್ಮ ಮತ್ತು ಅವರು ಮಕ್ಕಳಾದ ಚೈತ್ರ

ಮತ್ತು ಚೇತನ್ ರವರಿಂದ ದಿಃ25-02-2016 ರ ಕ್ರಯಪತ್ರದ ಮುಖಾಂತರ ಅಸೆಸ್ ಮೆಂಟ್ ನಂ.4695/4591 ವಿಸ್ತೀರ್ಣ 24 X 20 ಅಡಿಗಳು (8.55X 7.30 Mtrs) ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರವಾಗಿ ಪ್ರತಿವಾದಿಗೆ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿ ಪ್ರತಿವಾದಿಯ ಆಸ್ತಿಯಲ್ಲಿ ಮನೆ ನಿರ್ಮಿಸಲು ಪ್ರತಿವಾದಿಯ ಹೆಂಡತಿ ಯಶೋಧರವರ ಹೆಸರಿಗೆ ಮನೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನಮಗೆ ಗೊತ್ತಿಲ್ಲದಂತೆ ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ಆ ರೀತಿ ಮನೆ ಮಂಜೂರು ಮಾಡುವ ಸಮಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯ ಅಧಿಕಾರಿ ಸ್ಥಳ ಪರಿಶೀಲಿಸಿ ಮಂಜೂರು ಮಾಡಿರುತ್ತಾರೆಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದಂತೆ ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ಆ ಪ್ರಕಾರವಾಗಿ ಪ್ರತಿವಾದಿಗಳ ಆಸ್ತಿಯಲ್ಲಿ ಮಾತ್ರ ಮನೆ ಕಟ್ಟಿಕೊಂಡಿದ್ದಾರೆಂದರೆ ಸಾಕ್ಷಿಯು ನನ್ನ ಆಸ್ತಿಯನ್ನು ಸೇರಿಸಿಕೊಂಡು ಮನೆ ಕಟ್ಟಿಕೊಂಡಿದ್ದಾರೆಂದು ನುಡಿಯುತ್ತಾರೆ. ಪ್ರತಿವಾದಿಯು ಆಸ್ತಿ ಖರೀದಿಸುವ ಕ್ರಯಪತ್ರದ ಶೆಡ್ಯೂಲ್ ಆಸ್ತಿಯ ಚಕ್ಕುಬಂಧಿಯಲ್ಲಿ ನಿಮ್ಮ ಆಸ್ತಿ ಬರುದಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದಂತೆ ತಪ್ಪು ಚಕ್ಕುಬಂದಿ ನಮೂದಿಸಿಕೊಂಡು ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ನನ್ನ ಆಸ್ತಿಯ ಪೂರ್ವ ದಿಕ್ಷಿಗೆ ಪ್ರತಿವಾದಿಯ ಆಸ್ತಿ ಇರುತ್ತದೆ. ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಪ್ರತಿವಾದಿಯ ಆಸ್ತಿ ಇದೆ ತೋರಿಸಲು ಛಾಯಾಚಿತ್ರ ಹೊರತು ಪಡಿಸಿ ಬೇರೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಖಾತೆಯಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆಯನ್ನು ನಾನು ನೋಡಿರುತ್ತೇನೆ. ಪ್ರತಿವಾದಿಯ ಚಕ್ಕಬಂದಿಯ ಪೂರ್ವಕ್ಕೆ ದಾಸಣ್ಣನ ಮನೆ ಎಂದರೆ ಸರಿ, ಪಶ್ಚಿಮಕ್ಕೆ ಈಶಣ್ಣನ ಮನೆ ಎಂದರೆ ಸಾಕ್ಷಿ ನನ್ನ ಮನೆ ಇದೆ ಎಂದು ನುಡಿಯುತ್ತಾರೆ, ಉತ್ತರಕ್ಕೆ ಓಣಿ ಮತ್ತು ಖಾಲಿ ನಿವೇಶನ ಎಂದರೆ ಸಾಕ್ಷಿಯು ಹೊನ್ನಮ್ಮರವರ ಜಾಗ ಬರುತ್ತದೆ ಎಂದು

ನುಡಿಯುತ್ತಾರೆ, ದಕ್ಷಿಣಕ್ಕೆ ರಾಮಸ್ವಾಮಿರವರ ಮನೆ ಎಂದರೆ ಸರಿ. ಪ್ರತಿವಾದಿಯು ಮನೆ ಕಟ್ಟಿಕೊಂಡು ವಾಸವಿರುವ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ನನಗೆ ಸೇರಿದ 9 X 17 ಅಡಿ ವಿಸ್ತೀರ್ಣದ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದು ಅಷ್ಟು ವಿಸ್ತೀರ್ಣದ ಆಸ್ತಿಯ ಮೇಲೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಖರೀದಿಸಿರುವ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ ಸಿದ್ದರಾಜುರವರು ಸಿದ್ದರಾಮನಾಯ್ಕ ಬಿನ್ ತಿಮ್ಮಯ್ಯರವರಿಂದ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಎಲ್ಲಿಯೂ ಸಹ ದಾವಾ ಎ ಶೆಡ್ಯೂಲ್ ಆಸ್ತಿಯ ವಿಸ್ತೀರ್ಣ 18 X 41 ಅಡಿ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-18 ಕ್ರಯಪತ್ರದ ಪ್ರಕಾರ ನನ್ನ ತಂದೆ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ದಾಸಯ್ಯನ ಕರಿಯಮ್ಮ ರವರಿಂದ ಖರೀದಿ ಮಾಡಿದ್ದಾರೆಂದರೆ ಸರಿ. ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯಲ್ಲಿ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದವರಾಗಲೀ ಮತ್ತು ಅವರ ಮೂಲ ಮಾಲೀಕರ ಹೆಸರನ್ನಾಗಲೀ ಚಕ್ಕುಬಂದಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ಅಳತೆಮಾಡಿಸಿ ಖರೀದಿ ಮಾಡಿರುತ್ತಾರೆ. ನಾನು ಮತ್ತು ನನ್ನ ತಮ್ಮ ಈಶ್ವರಪ್ಪ ದಾವಾ ಆಸ್ತಿಯನ್ನು ವಿಭಾಗಮಾಡಿಕೊಂಡಾಗ ಅಳತೆ ಮಾಡಿಸಿಕೊಂಡಿರುವುದಿಲ್ಲ ಆದರೆ ತಲಾ 9 X 41 ಅಡಿಗಳ ಆಸ್ತಿಯನ್ನು ವಿಭಾಗಮಾಡಿಕೊಂದ್ದೇವೆಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯ ಪಶ್ಚಿಮ ಭಾಗದ ಆಸ್ತಿಯನ್ನು ನನ್ನ ತಮ್ಮ ಈಶ್ವರಪ್ಪನಿಗೆ ನೀಡಿದ್ದು ಪೂರ್ವ ಭಾಗದ ಆಸ್ತಿಯನ್ನು ನಾನು ಪಡೆದುಕೊಂಡಿರುತ್ತೇನೆ. ನಾನು ದಾವಾ ಎ ಶೆಡ್ಯೂಲ್ ಆಸ್ತಿಯ ಪೈಕಿ 9 X 41 ಅಡಿಗಳ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ಪುರಸಭೆಯಿಂದ ಇಲ್ಲಿಯವರಗೊ ಅಳತೆ ಮಾಡಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆ ಖರೀದಿಸುವಾಗ ಅಳತೆ ಮಾಡಿಸಿದ್ದಾರೆಂದು ನುಡಿಯುತ್ತಾರೆ. ಪ್ರತಿವಾದಿಯು

ನನಗೆ ಸೇರಿದ 9 X17 ಅಡಿಗಳ ವಿಸ್ತೀರ್ಣದ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಮನೆಕಟ್ಟಿಕೊಂಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ದಾಖಲು ಮಾಡಿದ ಅಸಲು ದಾವಾ ಸಂ.414/2016 ರಲ್ಲಿ ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಪ್ರತಿವಾದಿಯು ತಳಪಾಯ ಹಾಕಲು ಗುಂಡಿತೆಗೆಯಲುಪ್ರಯತ್ನಿಸುತ್ತಿದ್ದಾರೆಂದು ಅವರ ವಿರುದ್ದ ದಾವೆ ದಾಖಲೆ ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈ ದಾವಾ ಆಸ್ತಿಯೇ ಬೇರೆ ಆ ದಾವಾ ಆಸ್ತಿಯೇ ಬೇರೆ ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಗೆ ನಾನು ಹಕ್ಕುದಾರನಲ್ಲ ಮತ್ತು ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಎ ಶೆಡ್ಯೂಲ್ ಆಸ್ತಿಯ ಚಕ್ಕುಬಂದಿಯಲ್ಲಿ ಪ್ರತಿವಾದಿಯು ಆಸ್ತಿಯನ್ನು ಹೊಂದಿಲ್ಲದ ಕಾರಣ ನನ್ನ ಆಸ್ತಿಯನ್ನು ಒತ್ತುವರಿ ಮಾಡುವ ಪ್ರಶ್ನೇಯೇ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಕಾಣುವ ತಳಪಾಯ ಹಾಕಿರುವ ಜಾಗ ಪ್ರತಿವಾದಿಯದು ಎಂದರೆ ಸಾಕ್ಷಿಯು ನನ್ನ ಆಸ್ತಿಯನ್ನು ಸೇರಿಸಿಕೊಂಡು ತಳಪಾಯಹಾಕಿಕೊಂಡಿದ್ದಾರೆಂದು ನುಡಿಯುತ್ತಾರೆ. ಸದರಿ ತಳಪಾಯ ಹಾಕಿರುವ ಜಾಗ ಎಷ್ಟು ವಿಸ್ತೀರ್ಣದ ಜಾಗ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಯಾವತ್ತು ಸಹ ನನ್ನ ಆಸ್ತಿಯನ್ನು ಒತ್ತುವರಿ ಮಾಡಿಲ್ಲ ಮತ್ತು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಖರೀದಿಸಿರುವ ಆಸ್ತಿಯಲ್ಲಿ ನಮಗೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.